# ಆಹಾ ಸುದ್ದಿ!

★ ಸಸಿತೋಟ



ಮೆಕ್ಸಿಕೋದ ಈ ಅಧಿಕೃತ ಜ್ಯೋತಿಷಿ  ಹೊಸ ವರ್ಷದ ಭವಿಷ್ಯ ಹೇಳಲು ಸಜ್ಜಾಗಿದ್ದು, ಪೊರಕೆ ಹಿಡಿದಿರುವುದು ಹಳೆಯ ವರ್ಷದ ಹಳವಂಡಗಳನ್ನು ಗುಡಿಸಿ ಹಾಕಲೋ ಅಥವಾ ತಾನು ಹೇಳುವ ಕಸವನ್ನೆಲ್ಲ ಆಚೆ ಹಾಕಲೋ. ಒಟ್ಟಿನಲ್ಲಿ ನಮ್ಮಲ್ಲಿಯೂ ದೃಶ್ಯ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುವವರಿಗೆ ಒಳ್ಳೆಯ ಪ್ರಾಪ್.

ಹೊಸ ವರ್ಷದ ಅವಾಂತರಗಳ ಸುದ್ದಿ ಒಂದೊಂದಾಗಿ ಬರುತ್ತಿದೆ. ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ಕುಡಿದು ಚಿತ್ತಾಗಿದ್ದ ವ್ಯಕ್ತಿಯೊಬ್ಬ ನಾರ್ವೆಯ ಓಸ್ಲೋದಲ್ಲಿದ್ದ ತನ್ನ ಮನೆಗೆ ಹೋಗಲು ಟ್ಯಾಕ್ಸಿ ಏರಿದನಂತೆ. ಟ್ಯಾಕ್ಸಿ ಚಾಲಕ ಡೆನ್ಮಾರ್ಕ್, ಸ್ವೀಡನ್ ಎಂದೆಲ್ಲ ದೇಶಗಳನ್ನು ಸುತ್ತಿಸಿ ಕೊನೆಗೆ ಓಸ್ಲೋಗೆ ತಲುಪಿಸಿ ಸಾವಿರಾರು ಡಾಲರ್ ಬಿಲ್ ಮಾಡಿದನಂತೆ. ಕೊನೆಗೆ ತಕರಾರು ಪೊಲೀಸರ ಬಳಿ ಬಂತು. ಮೂರು ದೇಶಗಳನ್ನು ಸುತ್ತಿ ಬಳಸಿ ಹೋಗುವ ಪ್ರಚಂಡ ಚಾಲಕರಿರುವಾಗ ಬೆಂಗಳೂರಿನಲ್ಲಿ ಜಯನಗರ, ಜೆಪಿ ನಗರ ಸುತ್ತಿಸುವುದು ಹೆಚ್ಚಲ್ಲ ಬಿಡಿ.



ಮೆಕ್ಸಿಕೋದ ಈ ವ್ಯಕ್ತಿ ಹೊಸ ವರ್ಷದಲ್ಲಿ ಸಾವಿನ ಸಂತನನ್ನು ಪೂಜಿಸಿದ್ದು ಹೀಗೆ. ಮದ್ಯದ ಅಭಿಷೇಕ ಮಾಡುವ ಸಂಪ್ರದಾಯ ಹಲವೆಡೆ ಇದ್ದರೂ, ಒಳಗೆ ಸೇರಿದ ಮೇಲೆ ಅಭಿಷೇಕ ಮಾಡುವ ಸೃಜನಶೀಲ ಕಲೆ ಹೊಸ ವರ್ಷದ ಹಿಟ್ ಇರಬಹುದು.



ಪ್ಯಾಲೆಸ್ಟೀನ್‌ನ 82ರ ಈ ಅಜ್ಜಿ ದಿಂಬು ತಯಾರಿಕೆಗೆ ಹೊಸ ವಿನ್ಯಾಸ ಕೊಟ್ಟಿದ್ದಾಳೆ. ಕಳೆದ 67 ವರ್ಷಗಳಿಂದ ಕತ್ತರಿಸಿದ ತನ್ನ ಕೂದಲನ್ನು ತುಂಬಿ ದಿಂಬು ತಯಾರಿಸಿದ್ದಾಳಂತೆ. ರಾಸಾಯನಿಕ ಮುಕ್ತ ಹೊಸ ವಿನ್ಯಾಸವಿದು.

ಇಂದೋರ್‌ನ ಕೈಲಾಶ್ ವರ್ಮಾ ಸಿಂಹಗಳಿಗೇ ಕರುಣೆ, ಸ್ನೇಹದ ಪಾಠ ಹೇಳಲು ಹೊರಟಿದ್ದನಂತೆ. ಅಲ್ಲಿಯ ಮೃಗಾಲಯದಲ್ಲಿ ಸಿಂಹಿಣಿಯರನ್ನು ಇಟ್ಟ ಆವರಣಕ್ಕೆ ಅಕ್ರಮವಾಗಿ ಪ್ರವೇಶಿಸಿ ದೇವರು ತನಗೆ ಕನಸಿನಲ್ಲಿ ಹೇಳಿದ್ದ ಆದೇಶವನ್ನು ಜಾರಿಗೊಳಿಸಲು ಹೊರಟಿದ್ದನಂತೆ. ಅಲ್ಲಿಯೇ ತಿಂಡಿ ತಿಂದ. ಸಿಂಹಿಣಿಯರಿಗೆ ಅವನೇ ಲಘು ಉಪಾಹಾರವಾಗುವ ಮೊದಲು ಭದ್ರತಾ ಸಿಬ್ಬಂದಿ ಎಳೆದೊಯ್ದರಂತೆ. ಸದ್ಯ ಜೈಲು ಸಿಬ್ಬಂದಿಗೆ ಕರುಣೆಯ ಪಾಠ ಮಾಡುವ ತಯಾರಿಯಲ್ಲಿರಬಹುದು.



ಅಮೆರಿಕದಲ್ಲಿ ಎಲ್ಲವೂ ಮುಕ್ತ ಮುಕ್ತ. ಮಾದಕ ದ್ರವ್ಯ ಮಾರಿಜುವಾನಾ ಕೂಡಾ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದ್ದು, ಮಾದಕ ದ್ರವ್ಯ ನಿಲ್ದಾಣವೆಂದು ಹೆಸರು ನೀಡಲಾಗಿದೆಯಂತೆ. ಇದೇ ಕೊನೆಯ ನಿಲ್ದಾಣವಾಗದಿದ್ದರೆ ಸಾಕು.